(ಸದನವು 7 ಘಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು. ದಿನಾಂಕ : 14.7.2006 ರಂದು ಬೆಳಿಗ್ಗೆ 10.00 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

ದಿನದ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ಗುರುತಿನ ಪ್ರಶ್ನೆಗಳು

ಕೋಳಿ ಸಾಕಾಣಿಕೆಗೆ ಬರ್ಡ್ಸ್ ಫೀವರ್

318(1510) ಶ್ರೀ ಶ್ರೀನಿವಾಸಗೌಡ ಕೆ. (ಕೋಲಾರ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಬರ್ಡ್ಸ್ ಫೀವರ್‌ನಿಂದ ಸತ್ತ ಕೋಳಿಗಳ ಸಂಖ್ಯೆ ಎಷ್ಟು?

ಆ) ಯಾವಾವ ಜಿಲ್ಲೆಯಲ್ಲಿ ಈ ಖಾಯಿಲೆ ಹರಡಿದೆ?

ಇ) ಕೋಳಿ ಸಾಕಾಣಿಕೆ ಮಾಡುವ ರೈತರು ನಷ್ಟ ಅನುಭವಿಸಿರುವುದಕ್ಕೆ ಸರ್ಕಾರ ಏನಾದರೂ ಪರಿಹಾರ ನೀಡಲು ತೀರ್ಮಾನಿಸಿದೆಯೆ?

ಈ) ರೈತರು ಅನುಭವಿಸಿದ ನಷ್ಟಕ್ಕೆ ರೈತರ ಸಾಲದ ಮೇಲಿನ ಶೇ.5/– ಬಡ್ಡಿಯನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದೆ. ಆದರೆ ರಾಜ್ಯ ಸರ್ಕಾರವು ರೈತರಿಗೆ ಯಾವ ಪರಿಹಾರವನ್ನು ನೀಡಲು ತೀರ್ಮಾನಿಸಿದೆ (ತಿಳಿಸುವುದು)?

ಶ್ರೀ ರೇವೂ ನಾಯಕ ಬೆಳವಾಗಿ (ಪಶುಸಂಗೋಪನೆ ಸಚಿವರು) :

ಅ) ರಾಜ್ಯದಲ್ಲಿ ಹಕ್ಕಿ ಶೀತ ಜ್ವರ ಕಂಡು ಬಂದಿರುವುದಿಲ್ಲ. ಹಾಗಾಗಿ ಹಕ್ಕಿ ಶೀತ ಜ್ವರದಿಂದ ಯಾವುದೇ ಕೋಳಿ ಸತ್ತಿರುವುದಿಲ್ಲ.

ಆ) ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಹಕ್ಕಿ ಶೀತ ಜ್ವರ ಕಂಡು ಬಂದಿರುವುದಿಲ್ಲ.

ಇ) ರಾಜ್ಯದಲ್ಲಿ ಹಕ್ಕಿ ಶೀತ ಜ್ವರ ಕಂಡು ಬಂದಿಲ್ಲವಾದ್ದರಿಂದ ಪರಿಹಾರ ನೀಡುವ ವಿಚಾರ ತೀರ್ಮಾನಿಸಿರುವುದಿಲ್ಲ.

ಈ) ಕೇಂದ್ರ ಸರ್ಕಾರವು 31–03–2006 ರಿಂದ ಕೋಳಿ ಸಾಕಾಣಿಕೆದಾರರ ಸಾಲದ ಮೇಲೆ ಶೇ.4 ರಷ್ಟು ಬಡ್ಡಿ ಮನ್ನಾ ಮಾಡಿದ್ದು, ಈ ಯೋಜನೆ ಕರ್ನಾಟಕ ರಾಜ್ಯದ ಎಲ್ಲಾ ಕೋಳಿ ಸಾಕಾಣಿಕೆದಾರರಿಗೂ ಒಂದು ವರ್ಷದ ಅವಧಿಗೆ ಅನ್ವಯವಾಗುತ್ತದೆ.

ಮಹಿಳೆಯರಿಗೆ ಲೈಂಗಿಕ ಕಿರುಕುಳ

323(1671) ಶ್ರೀ ದಿನೇಶ್‌ಗುಂಡೂರಾವ (ಗಾಂಧಿನಗರ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉದ್ಯೋಗ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು ಮಹಿಳಾ ಸಿಬ್ಬಂದಿಗಳಿಗೆ ಲೈಂಗಿಕ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಳಂಬ ನೀತಿ ಅನುಸರಿಸಿ ಅವರಿಗೆ ಬಡ್ತಿ ನೀಡುವ ಹುನ್ನಾರ ನಡೆಸುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ, ದಿನಾಂಕ 21.07.2005ರ ರಾಜ್ಯ ಮಹಿಳಾ ಆಯೋಗವು ಮಾಡಿದ ಶಿಫಾರಸ್ಸು ಪತ್ರದ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು): ಅ) ಶ್ರೀ ವಿ. ಮುನಿನಾರಾಯಣಪ್ಪ. ಹಿಂದಿನ ಸಹಾಯಕ ನಿರ್ದೇಶಕರು. ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕೇಂದ್ರ. ಬೆಂಗಳೂರು ಇವರು ತಮ್ಮ ಕಛೇರಿಯ ಮಹಿಳಾ ಗ್ರೂಪ್ ಡಿ ಉದ್ಯೋಗಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದರೆಂಬ ಬಗ್ಗೆ ರಾಜ್ಯ ಮಹಿಳಾ ಆಯೋಗದಿಂದ ದೂರು ಬಂದಿರುತ್ತದೆ.

ಆ) ಇಲ್ಲ.

ಇ) ರಾಜ್ಯ ಮಹಿಳಾ ಆಯೋಗದ ದಿನಾಂಕ : 21–7–2005ರ ಸಲಹೆ ಮೇರೆಗೆ ದೂರು ನಿವಾರಣಾ ಸಮಿತಿಯನ್ನು ಪುನರ್ ರಚಿಸಿ, ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಸೂಚಿಸಲಾಗಿದೆ.

ವಿದ್ಯಾರ್ಥಿನಿಲಯದಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದು

325(1446) ಶ್ರೀ ರಾಮರೆಡ್ಡಿ (ಜಿ.ವಿ. ಬಾಗೇಪಲ್ಲಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾಗೇಪಲ್ಲಿ ಪಟ್ಟಣದಲ್ಲಿರುವ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವರ್ಗಗಳ ಮೆಟ್ರಿಕ್ ನಂತರದ ಬಾಲಕ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

ಬಾಗೇಪಲ್ಲಿ ಟೌನ್‌ನಲ್ಲಿರುವ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಮಂಜೂರಾತಿ ಸಂಖ್ಯೆ 50 (ಐವತ್ತು) ಇದ್ದು ಪ್ರವೇಶ ಕೋರಿ ಸಂಖ್ಯಾಬಲದ ಹೆಚ್ಚಳಕ್ಕೆ ಅಧಿಕ ಬೇಡಿಕೆ ಇದ್ದು, ಈ ಬಗ್ಗೆ ವಿದ್ಯಾರ್ಥಿಗಳಿಂದ ಸಾಕಷ್ಟು ಅರ್ಜಿಗಳು ಬರುತ್ತಿವೆ.